# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 722 |
| ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.02.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಟಿ.ಬಳ್ಳೇಕೆರೆ, ಅವ್ವೇರಹಳ್ಳಿ, ಗರೀಬಿ ಕಾಲೋನಿ ಇತ್ಯಾದಿ ಗ್ರಾಮಗಳ ರೈತರುಗಳಿಗೆ ಸುಗಮವಾಗಿ ಹೊಲ-ಗದ್ದೆಗಳಿಗೆ ಓಡಾಡಲು ಮತ್ತು ವಾಹನ ಚಲಾಯಿಸಲು ಸಂಚಾರಕ್ಕೆ ದಾರಿ ಇಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಹೌದು.<br>ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಟಿ.ಬಳ್ಳೇಕೆರೆ ಗ್ರಾಮದ ಸ.ನಂ. 6ರ ಸರ್ಕಾರಿ ಗೋಮಾಳದ ಜಮೀನಿನಲ್ಲಿ ಬಂಡಿದಾರಿಯನ್ನು ಕೆಲವು ಗ್ರಾಮಸ್ಥರು ಒತ್ತುವರಿ ಮಾಡಿಕೊಂಡು ಕಬ್ಬು ಬೆಳೆಯನ್ನು ಬೆಳೆದಿರುತ್ತಾರೆ. ಈಗಾಗಲೇ ಗ್ರಾಮಸ್ಥರು ಕಬ್ಬು ಕಟಾವು ಮಾಡಿದ್ದು, ಬಂಡಿ ದಾರಿಯನ್ನು ಗುರುತಿಸಿ ಗ್ರಾಮಸ್ಥರು/ ರೈತರಿಗೆ ಹೊಲಗದ್ದೆಗಳಿಗೆ ವ್ಯವಸಾಯ ಪರಿಕರಗಳೊಡನೆ ತೆರಳಲು ಅನುವು ಮಾಡಿಕೊಡಲಾಗಿರುತ್ತದೆ. |
| (ಆ) | ಅವ್ವೇರಹಳ್ಳಿ ಗ್ರಾಮದ ಸರ್ವೆ ನಂಬರ್ 3 ರಲ್ಲಿ ಗರೀಬಿ ಕಾಲೋನಿ ಇದ್ದು, ಸದರಿ ಕಾಲೋನಿ ರಸ್ತೆಯಿಂದ ಟಿ.ಬಳ್ಳೇಕೆರೆ ಗ್ರಾಮದಿಂದ ಹೊಲ-ಗದ್ದೆಗಳಗೆ ಹಾದು ಬರುವ ರಸ್ತೆಗೆ ಕಾಲೋನಿ ರಸ್ತೆಯು ಸರ್ವೆ ನಂ.6 ಗೋಮಾಳದ ಜಮೀನಿನ ಮುಖಾಂತರ ಹಾದು ಹೋಗಿ ಟಿ.ಬಳ್ಳೇಕೆರೆ ಗ್ರಾಮದ ರಸ್ತೆಯಿಂದ ಅನೇಕ ಗ್ರಾಮಗಳ ರಸ್ತೆಯನ್ನು ಸಂಪರ್ಕಿಸುವುದು ನಿಜವೇ; | ಹೌದು. |

| | | |
|---|---|---|
| (ಇ) | ಮದ್ದೂರು ತಾಲ್ಲೂಕಿನ ತಹಶೀಲ್ದಾರರಿಗೆ ಗ್ರಾಮಸ್ಥರಿಂದ ರಸ್ತೆ ಅಭಿವೃದ್ಧಿ ಪಡಿಸುವಂತೆ ಮನವಿ ಸಲ್ಲಿಕೆಯಾಗಿರುವುದು ನಿಜವೇ; ಹಾಗಿದ್ದಲ್ಲಿ, ಯಾವಾಗ ಸಲ್ಲಿಕೆಯಾಗಿದೆ ಮತ್ತು ಸಲ್ಲಿಕೆಯಾದಾಗಿನಿಂದ ಇಲ್ಲಿಯವರೆಗೂ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ಸಲ್ಲಿಸುವುದು) | ಮದ್ದೂರು ತಾಲ್ಲೂಕಿನ ತಹಶೀಲ್ದಾರರಿಗೆ ಗ್ರಾಮಸ್ಥರಿಂದ ಬಂಡಿದಾರಿಯನ್ನು ಗುರುತಿಸಲು ದಿನಾಂಕ: 09.11.2022 ರಂದು ಅರ್ಜಿ ಸಲ್ಲಿಕೆಯಾಗಿರುತ್ತದೆ.<br>ಅದರಂತೆ ಈಗಾಗಲೇ ಬಂಡಿದಾರಿಯನ್ನು ಗುರುತಿಸಿ ಗ್ರಾಮಸ್ಥರು/ರೈತರು ಹೊಲಗದ್ದೆಗಳಿಗೆ ವ್ಯವಸಾಯ ಪರಿಕರಗಳೊಡನೆ ತೆರಳಲು ಅನುವು ಮಾಡಲಾಗಿರುತ್ತದೆ. |
| (ಈ) | ಜೀವನೋಪಾಯಕ್ಕಾಗಿ ವ್ಯವಸಾಯವನ್ನೇ ಅವಲಂಬಿಸಿಕೊಂಡು ಹೊಲ-ಗದ್ದೆಗಳಿಗೆ ವ್ಯವಸಾಯ ಪರಿಕರಗಳೊಡನೆ ತೆರಳಲು ಸಾಧ್ಯವಾಗದೇ ಸಂಕಷ್ಟದಲ್ಲಿರುವ ರೈತರಿಗೆ ಯಾವ ನಿಗದಿತ ಕಾಲಮಿತಿಯೊಳಗೆ ರಸ್ತೆಯನ್ನು ಮಾಡಿಕೊಡಲಾಗುವುದು? (ಪೂರ್ಣ ವಿವರ ಸಲ್ಲಿಸುವುದು) | |

(ಕಡತ ಸಂಖ್ಯೆ: ಕಂಇ 15 ಎಲ್‌ಜಿವೈ 2023)

(ಆರ್.ಅಶೋಕ)
ಕಂದಾಯ ಸಚಿವರು